# ಹುಬ್ಬಳ್ಳಿಯಲ್ಲಿ ಹಿಂದು ಶಕ್ತಿ ವೈಭವ





## ಭಿನ್ನಮತಕ್ಕೆ ಚುಚ್ಚುಮದ್ದು

ರಾಜ್ಯ ಬಿಜೆಪಿ ಸರ್ಕಾರದಲ್ಲಿ ಬೂದಿ ಮುಚ್ಚಿದ ಕೆಂಡದಂತೆ ಭಿನ್ನಮತ ಹೊಗೆಯಾಡುತ್ತಿದ್ದು ಇದಕ್ಕೆ ಹುಬ್ಬಳ್ಳಿ ಆರ್‌ಎಸ್‌ಎಸ್ ಶಿಬಿರದಲ್ಲಿ ವರಿಷ್ಠರು ಚುಚ್ಚುಮದ್ದು ನೀಡುವ ಸಾಧ್ಯತೆಯೂ ಇದೆ. ಸರಸಂಘಚಾಲಕ ಮೋಹನ ಭಾಗವತ್ ಅವರೇ ಎರಡು ದಿನ ಇಲ್ಲಿರುವದರಿಂದ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿಗಳಿಗೆ ಹಾಗೂ ಪಕ್ಷದ ರಾಜ್ಯಾಧ್ಯಕ್ಷರಿಗೆ ಬುದ್ಧಿ ಮಾತು ಹೇಳಲಿದ್ದಾರೆಂಬ ಮಾತುಗಳು ಪಕ್ಷದ ವಲಯಗಳಲ್ಲಿ ಕೇಳಿಬರುತ್ತಿವೆ.

## ಶಿಬಿರದಲ್ಲಿ ಏನೇನು?

ಜನವರಿ 27 ರಂದು ಬೆಳಗ್ಗೆ 10.45 ಕ್ಕೆ ಶಿಬಿರದ ಉದ್ಘಾಟನೆ ನಡೆಯಲಿದೆ. ಜನವರಿ 28 ರಂದು ಹುಬ್ಬಳ್ಳಿಯಲ್ಲಿ ಮೂರು ಪಥಸಂಚಲನಗಳು ಹೊರಡುತ್ತವೆ. ಮೂರೂ ಪಥಸಂಚಲನಗಳು ಕಿತ್ತೂರ ಚೆನ್ನಮ್ಮ ವೃತ್ತದಲ್ಲಿ ಒಂದಾಗಿ ಸೇರುವ ಅದ್ಭುತ ದೃಶ್ಯವೊಂದನ್ನು ಗಣವೇಷಧಾರಿ ಸ್ವಯಂಸೇವಕರು ನಿರ್ಮಿಸಲಿದ್ದಾರೆ. ಅದೇ ದಿನ ಧಾರವಾಡದಲ್ಲೂ ಪಥಸಂಚಲನ ನಡೆಯಲಿದೆ.

ಜನವರಿ 29 ರಂದು ಸಂಜೆ 5 ಗಂಟೆಗೆ ಶಿಬಿರದ ಸಮಾರೋಪ ಸಮಾರಂಭ. ಅದಕ್ಕೆ ಮುನ್ನ ಮಧ್ಯಾಹ್ನ 2.30 ಕ್ಕೆ ಪೂಜ್ಯ ಸಂತರ ಗೋಷ್ಠಿ, ಸಮಾಜ ಪ್ರಮುಖರ ಗೋಷ್ಠಿ ಹಾಗೂ ಮಾತೆಯರ ಗೋಷ್ಠಿಗಳು ನಡೆಯಲಿವೆ.

ಶಿಬಿರದ ಮಹಾದ್ವಾರವನ್ನು ಪ್ರವೇಶಿಸುತ್ತಿದ್ದಂತೆ ಎಡಭಾಗದಲ್ಲಿ 'ಯುಗದೃಷ್ಟಿ' ಪ್ರದರ್ಶಿನಿಯು ಇರುತ್ತದೆ. ವಿಶ್ವದ ಹತ್ತು ಹಲವು ದೇಶಗಳಲ್ಲಿ ಕಾಣಬರುವ ಹಿಂದು ಸಂಸ್ಕೃತಿಯ ಅಚ್ಚಳಿಯದ ಪ್ರಭಾವ ಮತ್ತು ಎಲ್ಲ ಅಡೆತಡೆಗಳನ್ನು ಮೀರಿ ತನ್ನ ಗುರಿಯೆಡೆಗೆ ಸಾಗುತ್ತಿರುವ ಸಂಘ ಇತ್ಯಾದಿಗಳ ಕುರಿತು ಮನಸೆಳೆಯುವ ವಿಷಯಗಳನ್ನು 'ಯುಗದೃಷ್ಟಿ' ಒಳಗೊಂಡಿದೆ.

ಹುಬ್ಬಳ್ಳಿ, 26– ಪಕ್ಷ–ಸಂಘಟನೆಗಳಿಗೆ ಪ್ರಬಲ ಟಾನಿಕ್ ಆಗಿರುವ ಹುಬ್ಬಳ್ಳಿ ಈಗ ಸಂಘ ಪರಿವಾರಕ್ಕೆ ಬಲ ತುಂಬಲು ಸಜ್ಜಾಗಿದೆ.

ಶಿಸ್ತಿನ ಪಕ್ಷ ಬಿಜೆಪಿ ದಾರಿ ತಪ್ಪುತ್ತಿರುವದು ಹಾಗೂ ಶಿಸ್ತಿನ ಅನೇಕ ಸಿಪಾಯಿಗಳಲ್ಲೂ ರಾಷ್ಟ್ರಪ್ರೇಮ ಪ್ರಶ್ನಾರ್ಹವಾಗುತ್ತಿರುವ ಈ ದಿನಗಳಲ್ಲಿ 'ರಾಷ್ಟ್ರ, ಸೇವಕ, ಸೇವೆ'ಗೆಂದೇ ಮೈದಳೆದ ರಾಷ್ಟ್ರೀಯ ಸ್ವಯಂ ಸೇವಕ ಸಂಘ ದೇಶದಲ್ಲಿ ಶಿಸ್ತು ಮೂಡಿಸಲು ಹೆಣಗಾಡುತ್ತಿದೆ. ಆಲದ ಮರದಂತೆ ಸಂಘಟನೆ ಗೋಚರಿಸಿದ್ದರೂ ಅದರ ಟೊಂಗೆಗಳಂತಿರುವ ಬಿಜೆಪಿ ಮತ್ತಿತರ ಪರಿವಾರಗಳಲ್ಲಿಯೇ ಇತ್ತೀಚಿನ ವರ್ಷಗಳಲ್ಲಿ ಆಶಿಸ್ತು ತಾಂಡವವಾಡುತ್ತಿರುವಾಗ ಸಹಜವಾಗಿ ಜನತೆ ಆರ್.ಎಸ್.ಎಸ್. ಸಿದ್ಧಾಂತಗಳ ಆಚರಣೆ ವೈಖರಿಯ ಪ್ರಾಮಾಣಿಕತೆಯ ಬಗ್ಗೆಯೇ ಪ್ರಶ್ನೆ ಮಾಡುವ ಸ್ಥಿತಿ ಬಂದೊದಗಿದೆ. ಇಂಥದರಲ್ಲಿ 'ಹೇಳುವದೊಂದು ಮಾಡುವದೊಂದು ಆಗಬಾರದು' ಎಂಬ ಸವಾಲು ಆರ್‌ಎಸ್‌ಎಸ್ ಮುಂದಿದೆ. ಈ 'ಸಂದಿಗ್ದ' ಪರಿಸ್ಥಿತಿಯಲ್ಲಿ ಹುಬ್ಬಳ್ಳಿ ನಗರದಲ್ಲಿ ಇದೇ ಮೊದಲ ಬಾರಿಗೆ ನಡೆಯುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತದ ಬೃಹತ್ ಶಿಬಿರವು ಸಂಘಟನೆ ಹಾಗೂ ದೇಶ ಪ್ರೇಮ ಸಿದ್ಧಾಂತ ಪ್ರಸಾರ ಬಗ್ಗೆಯೇ ಪ್ರಮುಖವಾಗಿ ಚಿಂತನ–ಮಂಥನ ನಡೆಸಲಿದೆ.

ಆರ್‌ಎಸ್‌ಎಸ್ ಕರ್ನಾಟಕ ಉತ್ತರ ಪ್ರಾಂತ ರಚನೆ ಇತ್ತೀಚಿನದಾದರೂ ಈ ಸಂಘಟನೆಗೆ ಶಕ್ತಿ ತುಂಬಿದ್ದು ಉತ್ತರ ಕರ್ನಾಟಕದ ಈ ಭಾಗ. ವಿಶೇಷವಾಗಿ ಈದಗಾ ಮೈದಾನ ಹೋರಾಟದಲ್ಲಿ ಆರ್‌ಎಸ್‌ಎಸ್ ಬೇರು ವ್ಯಾಪಿಸುವ ಮೂಲಕ ಸಂಘ ಪರಿವಾರದ ಪ್ರಮುಖ ರಾಜಕೀಯ ಘಟಕವೇ ಆದ ಭಾರತೀಯ ಜನತಾ ಪಕ್ಷ ಕೂಡ ರಾಜ್ಯದಲ್ಲಿ ಅಸ್ತಿತ್ವ ಕಾಣಲು ಕಾರಣವಾಯಿತು. ಜನರ 'ಭಾವನಾತ್ಮಕ' ವಿಷಯಗಳನ್ನು ಬ್ಲಾಕ್‌ಮೇಲ್ ಮಾಡುವ ತಂತ್ರಗಾರಿಕೆ ಇದು ಎಂದು ವಿರೋಧಿ ಸಂಘಟನೆ, ಪಕ್ಷಗಳು ಹುಯಿಲೆಬ್ಬಿಸಿದರೂ ಸಂಘ ಪರಿವಾರದ ಒತ್ತಾಸೆಗೆ ಜನ ಸ್ಪಂದಿಸಿ ಅದರಿಂದ ಕೇಸರಿ ಬಾವುಟ ಇಲ್ಲಿ ಹಾರಾಡುವಂತಾಯಿತು ಎನ್ನುವದು ಇದರ ಸಂಘಟನಾ ಕೌಶಲ್ಯವನ್ನು ತೋರಿಸುತ್ತಿದೆ. ಆದರೆ ನಂತರ ಅಂತಹ ಭಾವನಾತ್ಮಕ ವಿಷಯಗಳ ಕೊರತೆ ಸ್ಥಳೀಯ ಮಟ್ಟದಲ್ಲಿ ಇಲ್ಲದಾದ ನಂತರ ಹಿಂದುತ್ವ ಭೂಮಿಕೆಯನ್ನು ಹೇಗೆ ಭದ್ರಗೊಳಿಸಬೇಕೆಂಬುದೂ ಸವಾಲಿನದಾಗಿದೆ. ಜಮ್ಮು ಕಾಶ್ಮೀರ ಸೇರಿದಂತೆ ಕೆಲವೆಡೆ ನಡೆದ ವಿಧ್ವಂಸಕ ಕೃತ್ಯಗಳ ಹಿನ್ನೆಲೆಯಲ್ಲಿ ರಾಷ್ಟ್ರಭಕ್ತಿ ಪಠಿಸುವ ಅಗತ್ಯತೆಯನ್ನು ಮತ್ತೇ ಸಂಘಟನೆ ಬಿತ್ತಲು ಆರಂಭಿಸಿದ್ದು ಹಿಂದು ಒಂದು ಧರ್ಮವಲ್ಲ. ಜೀವನ ಪಥ ಎಂದು ಸಾರಿ ಸಾರಿ ಹೇಳಲಾಗುತ್ತಿದೆ.

### 'ಸಂಘ ಮೂಲಂ ಮಹಾಬಲಂ'

ಸಂಘಟನೆ ಬಲವಾಗಿದ್ದರೆ ಅದೇ ಮಹಾಬಲ ಎಂಬುದು ಈಗ ಹುಬ್ಬಳ್ಳಿ ಶಿಬಿರದ ಮುಖ್ಯ ಧ್ಯೇಯವಾಗಿದೆ. 'ಸಂಘ ಮೂಲಂ ಮಹಾಬಲಂ' ಘೋಷಣೆಯೊಂದಿಗೆ ಸ್ವಯಂ ಸೇವಾ ಕಾರ್ಯಕರ್ತರಲ್ಲಿ ಸಂಘದ ಸಿದ್ಧಾಂತ ತಿಳಿಸಿ ರಾಷ್ಟ್ರಗೌರವ ವೃದ್ಧಿಸುವದೇ ಇದರ ಉದ್ದೇಶ. ಶಿಬಿರದಲ್ಲಿ ಉತ್ತರ ಕರ್ನಾಟಕದ 13 ಜಿಲ್ಲೆಗಳ 25 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು ಗಣವೇಷದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸರಸಂಘ ಚಾಲಕ ಮೋಹನ ಭಾಗವತ ಸೇರಿದಂತೆ ಎಲ್ಲ ಮುಖಂಡರು ಹಾಗೂ ಕಾರ್ಯಕರ್ತರಿಗೆ ಒಂದೇ ತೆರನಾದ ವಸತಿ–ಭೋಜನ ವ್ಯವಸ್ಥೆ ಇಲ್ಲಿರುವದೇ ವಿಶೇಷ.

■ ಕೋಳಿವಾಡ




- 1996 ರಲ್ಲಿ ಸಂಘದ ಕಾರ್ಯವಿಸ್ತಾರದ ದೃಷ್ಟಿಯಿಂದ ಕರ್ನಾಟಕ- ಉತ್ತರ ಪ್ರಾಂತದ ರಚನೆಯಾಯಿತು. ಅದರ ಕೇಂದ್ರ ಹುಬ್ಬಳ್ಳಿ. ಈ ಹೊಸ ವ್ಯವಸ್ಥೆಗೆ ಈಗ 15 ವರ್ಷ ತುಂಬಿ 16ನೇ ವರ್ಷದ ಹೊಸ್ತಿಲು. ಈ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ಮತ್ತೊಂದು ಶಿಬಿರದ ಸಿದ್ಧತೆ ನಡೆಯುತ್ತಿದೆ.
- ಹುಬ್ಬಳ್ಳಿ ಗೋಕುಲ ರಸ್ತೆ ತಾರಿಹಾಳ ಬೈಪಾಸ್ ಸಮೀಪದ ಸುಮಾರು 120 ಎಕರೆ ಪ್ರದೇಶ ಈ ಶಿಬಿರದ ಸ್ಥಾನ. ಇದಕ್ಕೆ ವಿಜಯನಗರವೆಂದು ನಾಮಕರಣ ಮಾಡಲಾಗಿದೆ. ಈಗಾಗಲೇ ಈ ಶಿಬಿರಕ್ಕಾಗಿ 25,000 ಕ್ಕೂ ಹೆಚ್ಚು ಜನ ತಮ್ಮ ಹೆಸರುಗಳನ್ನು ನೋಂದಾಯಿಸಿದ್ದಾರೆ.
- ಶಿಬಿರದಲ್ಲಿ ಟೆಂಟ್‌ಗಳ ನಿರ್ಮಾಣ ಆಗಿದ್ದು ಒಟ್ಟು 16 ನಗರಗಳು (ಬೃಹದಾಕಾರದ ಟೆಂಟ್ ಹಾಗೂ ಅದರೊಳಗೆ ಕೊಠಡಿ ವ್ಯವಸ್ಥೆ) ನಿರ್ಮಾಣವಾಗಿದೆ. ಒಂದು ತಾತ್ಕಾಲಿಕ ಆಸ್ಪತ್ರೆಯೂ ತಲೆ ಎತ್ತಿದೆ. ನೀರಿನ ಅವಶ್ಯಕತೆಗಾಗಿ ಒಂದು ದೊಡ್ಡ ಟ್ಯಾಂಕ ನಿರ್ಮಿಸಲಾಗಿದೆ. ಇದಲ್ಲದೆ ಪ್ರತಿ ನಗರಕ್ಕಾಗಿ 2.25 ಲಕ್ಷ ಲೀಟರ್ ನೀರಿನ ದಾಸ್ತಾನು ಮಾಡಲು ಸಣ್ಣ ಟ್ಯಾಂಕಗಳು ನಿರ್ಮಾಣಗೊಂಡಿವೆ. ಪ್ರತಿನಗರದಲ್ಲೂ ಪಾಕಶಾಲೆ, ಶೌಚಾಲಯಗಳು- ಹೀಗೆ ಸ್ವಯಂಪೂರ್ಣ ನಗರಗಳು ಸಿದ್ಧಗೊಂಡಿವೆ. ಶಾರೀರಿಕ ಚಟುವಟಿಕೆಗಳಿಗಾಗಿ ಶಿಬಿರದ ಮಧ್ಯ ಭಾಗದಲ್ಲಿ 40 ಎಕರೆ ವಿಸ್ತಾರದ ಮೈದಾನ ಸಜ್ಜುಗೊಂಡಿದೆ.
- ಸಮಾಜ ಬಾಂಧವರು ಶಿಬಿರಾರ್ಥಿಗಳಿಗೆ ಉಣಬಡಿಸಲೆಂದು ಕಡಕ್ ರೊಟ್ಟಿ, ದವಸಧಾನ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಹುಬ್ಬಳ್ಳಿಯ ಮನೆಮನೆಗಳಿಂದ ಒಟ್ಟು ಒಂದು ಲಕ್ಷ ಶೇಂಗಾ ಹೋಳಿಗೆಗಳನ್ನು ತಯಾರಿಸಿ, ಬೇರೆ ಬೇರೆ ಊರುಗಳಿಂದ ಹುಬ್ಬಳ್ಳಿಗೆ ಆಗಮಿಸುವ ಶಿಬಿರಾರ್ಥಿಗಳಿಗೆಲ್ಲ ಪ್ರೀತಿಯ ಸಿಹಿಭೋಜನ ನೀಡುವ ಸಿದ್ಧತೆ ಭರ್ಜರಿಯಾಗಿದೆ.
- ಸರಸಂಘಚಾಲಕ ಮೋಹನ್‌ಜೀ ಭಾಗವತ್, ಸರಕಾರ್ಯವಾಹ ಸುರೇಶ ಜೋಶಿ ಮತ್ತು ಸಂಘದ ಅನೇಕ ಕೇಂದ್ರೀಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಲಿದ್ದಾರೆ.



## 'ಸಂಘ ಮೂಲಂ ಮಹಾಬಲಂ'

ದೇಶಭಕ್ತಿ ಎಂದಾಗ, ದೇಶಕ್ಕಾಗಿ ಒಂದಿಲ್ಲೊಂದು ಸಾಮಾಜಿಕ ಕಾರ್ಯದಲ್ಲಿ, ತೊಡಗಿಕೊಂಡಿರುವುದು ಎಂದೇ ಅರ್ಥ. ಇದು ಆರ್.ಎಸ್.ಎಸ್.ನ ತಾತ್ವಿಕ ಭೂಮಿಕೆ. ಆರ್.ಎಸ್.ಎಸ್.ನ ಶಿಬಿರಗಳು ಸಂಚಲನಗಳೆಂದರೆ ತರುಣ ಹೃದಯಗಳಲ್ಲಿ ದೇಶಭಕ್ತಿಯ ಭಾವನೆಗಳ ಸಂಚಲನ! ನೋಡುವವರಿಗೂ ರೋಮಾಂಚನ! ಅದರಲ್ಲಿ ಭಾಗವಹಿಸಿದವರಿಗಂತೂ ಜೀವನದುದ್ದಕ್ಕೂ ಮರೆಯಲಾಗದ ಅನುಭವದ ಸಿಂಚನ. ಅಂತಹ ಒಂದು ಶಿಬಿರ ಹುಬ್ಬಳ್ಳಿಯಲ್ಲಿ ನಡೆಯಲಿದೆ ಎಂಬ ಸುದ್ದಿಯೇ ಕರ್ನಾಟಕದ ಉತ್ತರಭಾಗದಲ್ಲಿ ಸಂಚಲನವನ್ನು ಉಂಟುಮಾಡುತ್ತಿದೆ.

### ಶಿಬಿರ ವೃತ್ತಾಂತ

ಕರ್ನಾಟಕದ ಮಟ್ಟಿಗೆ ಉಲ್ಲೇಖಾರ್ಹ ಶಿಬಿರಗಳೆಂದರೆ ಬೆಂಗಳೂರಿನಲ್ಲಿ ನಡೆದ 1948ರ, 1962ರ, 1982ರ 'ಹಿಂದು ಸಂಗಮ' ಮತ್ತು 2002 ರ 'ಸಮರಸತಾ ಸಂಗಮ' ಶಿಬಿರಗಳು.

1948ರ ಶಿಬಿರಕ್ಕೆ ದೇಶ ವಿಭಜನೆಯ ಹಿನ್ನೆಲೆ ಇತ್ತು. ಸಾರ್ವಜನಿಕರಲ್ಲಿ ದೇಶ ತುಂಡಾದ ಬಗೆಗೆ ವಿಷಾದ, ನೋವು, ನಿರಾಸೆಗಳಿದ್ದವು. ಸಾಮರ್ಥ್ಯ ಸಂಪನ್ನ, ಪೌರುಷಯುಕ್ತ ನೇತೃತ್ವದ ನಿರೀಕ್ಷೆಯಲ್ಲಿ ದೇಶ ಕಾತರದಿಂದಿತ್ತು. ಸಹಜವಾಗಿಯೇ ಆಗ ಸಮಾಜ, ಆರ್.ಎಸ್.ಎಸ್.ನ. ಕಡೆಗೆ ಆಸೆಯ ಕಣ್ಣುಗಳಿಂದ ನೋಡಿತು. ಆ ಶಿಬಿರದ ಯಶಸ್ಸಿಗಾಗಿ ಪಕ್ಷ ಭೇದ ಮರೆತು ಎಲ್ಲರೂ ಸಹಕರಿಸಿದರು. ಆ ಶಿಬಿರದೊಂದಿಗೆ ಬಾಲ ಸ್ವಯಂಸೇವಕರ ಶಿಬಿರವೂ ಆಯೋಜಿತವಾಗಿತ್ತು. ಶಿಬಿರದಲ್ಲಿ ಆಗಿನ ಸರಸಂಘಚಾಲಕರಾಗಿದ್ದ ಗುರೂಜೀ ಗೋಳವಲ್ಕರರ ಮಾರ್ಗದರ್ಶನ. 'ಕಾಶ್ಮೀರ ಸಮಸ್ಯೆಗೆ ಏಳು ದಿನಗಳೊಳಗೆ ವಿಶ್ವಸಂಸ್ಥೆಯಿಂದ ಪರಿಹಾರ' ಎಂದಿದ್ದರು ನೆಹರೂ, ಗುರೂಜೀಯವರು ಆಗ 'ಏಳುದಿನಗಳಲ್ಲ, ಏಳು ವರ್ಷಗಳಾದರೂ ವಿಶ್ವ ಸಂಸ್ಥೆಯಿಂದ ಪರಿಹಾರ ಸಿಗದು' ಎಂದು ಸಾರಿದ್ದರು. ಅವರ ವಿಶ್ಲೇಷಣೆಯೇ ಸರಿಯಾದುದೆಂದು ಇತಿಹಾಸ ಸಾರಿ ಹೇಳುತ್ತಿದೆ.

ಆ ಶಿಬಿರ ಮುಗಿಯುತ್ತಿದ್ದಂತೆಯೇ, ಗಾಂದಿ ಹತ್ಯೆಯ ಆರೋಪ ಹೊರಿಸಿ ಸಂಘದ ಮೇಲೆ ನಿರ್ಬಂಧ ಹೊರಿಸಲಾಯಿತು. ಅಂದಿನ ಸಂಘದ ನಾಯಕರಾಗಿದ್ದ ಗುರೂಜೀ, ಯಾದವರಾವ್‌ಜೀ, ಕೃ. ಸೂರ್ಯನಾರಾಯಣರಾವ್ ಮುಂತಾದ ಸಂಘದ ಹಿರಿಯರನ್ನು ಬಂಧಿಸಲಾಯಿತು. ಅಸಂಖ್ಯ ಕಾರ್ಯಕರ್ತರ ಮೇಲೆ ಹಲ್ಲೆ. ಬಂಧನ, ಅವಹೇಳನ, ಸರಕಾರದ ಅಪಪ್ರಚಾರಕ್ಕೆ ಮರುಳಾದ ಮುಗ್ಧ ಜನತೆಯೂ ಸಂಘದವರೆಂದರೆ ಮೂಗುಮುರಿಯುವಂತಾಗಿತ್ತು. ಆ ಶಿಬಿರಕ್ಕಾಗಿ ಕಾರ್ಯಕರ್ತರು ಅಪಾರ ಪರಿಶ್ರಮದಿಂದ, ಸಾಲಸೋಲಮಾಡಿ ಸಂಗ್ರಹಿಸಿದ್ದ ವಸ್ತುಗಳು, ಆಹಾರ ಸಾಮಗ್ರಿಗಳನ್ನು ಸರಕಾರ ವಶಪಡಿಸಿಕೊಂಡಿತು. ಅವುಗಳಲ್ಲಿ ಯಾವುದೂ ಮರಳಿ ಸಿಗಲೇ ಇಲ್ಲ– ಸರಕಾರ ಬೇಷರತ್ತಾಗಿ ಸಂಘದ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದ ಮೇಲೂ ಸಿಗಲಿಲ್ಲ. ಹಾಗೆಂದು ಸಂಘದ ಸಂಚಲನವೇನೂ ನಿಲ್ಲಲಿಲ್ಲ!

1962ರ ಶಿಬಿರಕ್ಕೆ, ಚೀನಾದೊಂದಿಗೆ, ನಡೆದ ಯುದ್ಧದ ಹಿನ್ನೆಲೆ, ಭಾರತದ ಈಶಾನ್ಯ ಸರಹದ್ದಿನ ಸಾವಿರಾರು ಚದರ ಮೈಲಿ ಭೂಪ್ರದೇಶವನ್ನು ಚೀನಾ ಆಕ್ರಮಿಸಿತ್ತು. ಯುದ್ಧದಲ್ಲಿಭಾರತಕ್ಕೆ ಅಪಮಾನಕರ ಸೋಲಾಗಿತ್ತು. ಇಡೀ ದೇಶದಲ್ಲಿ ಆತ್ಮವಿಶ್ವಾಸವನ್ನು ತುಂಬುವ ತೀವ್ರ ಅವಶ್ಯಕತೆ ಇದ್ದಾಗ ಕರ್ನಾಟಕದಲ್ಲಿ ಸಂಘ ಮತ್ತೊಂದು ಬೃಹತ್ ತರುಣ ಶಿಬಿರವನ್ನು ಆಯೋಜಿಸಿತು.

ಬೆಂಗಳೂರಿನ ಆಗಿನ ಧರ್ಮಾಂಬುಧಿ ಕೆರೆ– ಈಗಿನ ಕೆ.ಎಸ್.ಆರ್.ಟಿ.ಸಿ–ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಜಾಗ, ಶಿಬಿರದ ಸ್ಥಾನ. ಶಿಬಿರಕ್ಕೆ ಮುನ್ನ ಮೂರು ದಿನ ಧಾರಾಕಾರ ಮಳೆ. ಶಿಬಿರ ನಡೆಯಬೇಕಾಗಿದ್ದ ಸ್ಥಳದಲ್ಲಿ ಮಂಡಿ ಮಟ್ಟಕ್ಕೆ ನೀರು ತುಂಬಿಕೊಂಡಿತು. ಆದರೆ ಸ್ವಯಂಸೇವರಕು ಧೃತಿಗೆಡಲಿಲ್ಲ. ಮೊದಲೇ ನಿಶ್ಚಯಿಸಿದಂತೆ ಎಲ್ಲ ಕಾರ್ಯಕ್ರಮಗಳನ್ನೂ ಅಲ್ಲೇ ನಡೆಸಲಾಯಿತು. ಅವರ ಮನೋಬಲವನ್ನು ನೋಡಿ ವರುಣನೂ ಸ್ತಬ್ಧನಾದ. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದು ಸೇರಿದ್ಧ ಶಿಬಿರಾರ್ಥಿಗಳಿಗೆ ವಸತಿಯ ವ್ಯವಸ್ಥೆ ಮಾಡಿದುದು ಬೆಂಗಳೂರಿನ ಮಹಾಜನತೆ– ತಮ್ಮ ತಮ್ಮ ಮನೆಗಳಲ್ಲಿ. ಗುರುತು– ಪರಿಚಯ ಇಲ್ಲದ, ಯಾವುದೋ ಊರಿನಿಂದ ಬಂದ ಸ್ವಯಂಸೇವಕರಿಗೆ ವಸತಿ, ಸ್ನಾನ, ಊಟೋಪಚಾರಗಳನ್ನೂ ನೀಡಿದರು. ಸಹರ್ಷ ಸ್ವಾಗತಿಸಿದರು. ಪಕ್ಷ–ಜಾತಿ ಭೇದಗಳಿಂದ ಮೇಲೆದ್ದು ನಿಂತರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀ ಗುರೂಜೀಯವರಿಂದ ಮಾರ್ಗದರ್ಶನ. ಜನತೆಯನ್ನು ಉದ್ದೇಶಿಸಿ ಧೈರ್ಯದ ಮಾತುಗಳು, ಸ್ವಯಂಸೇವಕರ ಸಂಚಲನದಿಂದ ಜನರ ಮನಸ್ಸಿನಲ್ಲಿ ಮತ್ತೆ ಭರವಸೆ ಮೂಡಿತು.

### 1982ರ ಹಿಂದು ಸಂಗಮ

1982 ರ ಶಿಬಿರಕ್ಕೆ ಬಂದು ಸೇರಿದ ಸ್ವಯಂಸೇವಕರು 21287, 1225 ಘೋಷ್ ವಾದಕರು ರಣವಾದ್ಯಗಳನ್ನು ಮೊಳಗಿಸಿದರು. ಅರಮನೆ ಮೈದಾನದಲ್ಲಿ ಶೌರ್ಯದ ಸಂಚಲನ. ಮಿಲಿಟರಿ ಮಾದರಿಯ ಡೇರೆಗಳಲ್ಲಿ ಸ್ವಯಂಸೇವಕರ ವಸತಿಗಳಿಗಾಗಿ ಎಂಟು ಪ್ರತ್ಯೇಕ ನಗರಗಳ ರಚನೆ, 120 ಎಕರೆ ವಿಸ್ತಾರದಲ್ಲಿ ಶಿಬಿರಸ್ಥಾನ. ಪಥಸಂಚಲನದ ಉದ್ದ ಎಳು ಕಿಲೋಮಿಟರ್!

ಆ ಶಿಬಿರದ ಅಧ್ಯಕ್ಷತೆ ವಹಿಸಿದ್ದವರು ಪೂಜ್ಯ ಪೇಜಾವರ ಮಠಾಧೀಶ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳು. ಆಗ ಸರಸಂಘಚಾಲಕರಾಗಿದ್ದ ಬಾಳಾಸಾಹೇಬ್ ದೇವರಸರ ಮಾರ್ಗದರ್ಶನ. ಈ ಶಿಬಿರ ಮತ್ತೊಮ್ಮೆ ಬೆಂಗಳೂರಿನ ನಾಗರಿಕರು ಅಚ್ಚರಿಯಿಂದ, ಅಭಿಮಾನದಿಂದ, ತೆರೆದ ಹೃದಯದಿಂದ ಸಂಘವನ್ನು ಸ್ವಾಗತಿಸುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಅಂದು ಅದೊಂದು ದಾಖಲೆಯ ಶಿಬಿರ.



## ಒಂದು ಪಕ್ಷಿನೋಟ

# ಆರ್‌ಎಸ್‌ಎಸ್ ಮಹಾಶಿಬಿರಗಳು

### 2002 ರ ಹೊಸ ದಾಖಲೆ: ಸಮರಸತಾ ಸಂಗಮ

2002 ಜನವರಿಯಲ್ಲಿ ನಡೆದ ಈ ಶಿಬಿರದಲ್ಲಿ ದಕ್ಷಿಣ ಕರ್ನಾಟಕದ 17 ಜಿಲ್ಲೆಗಳಿಂದ ಬಂದು ಸೇರಿದ ಸ್ವಯಂಸೇವಕರು 40000 ಕ್ಕೂ ಮಿಕ್ಕಿ. ಅವರು ಕರ್ನಾಟಕದ 10000 ಸ್ಥಾನಗಳನ್ನು ಪ್ರತಿನಿಧಿಸಿದ್ದರು. ಬೆಂಗಳೂರಿನ ನಾಗವಾರ, ಶಿಬಿರಸ್ಥಾನ, ಈ ಬಾರಿ 270 ಎಕರೆ ಜಾಗದಲ್ಲಿ 17 ನಗರಗಳನ್ನು ನಿರ್ಮಿಸಲಾಗಿತ್ತು. ಈ ಶಿಬಿರದ ಅಂಕಿ ಅಂಶಗಳು ರೋಚಕ, ಅದ್ಭುತ! ನೆಲ ಅಗೆದು ತಾತ್ಕಾಲಿಕ ಕೆರೆಗಳನ್ನು ನಿರ್ಮಿಸಿ ಶಿಬಿರಕ್ಕಾಗಿ ಒಂದು ಕೋಟಿ ಲೀಟರ್ ನೀರನ್ನು ಸಂಗ್ರಹಿಸಿಡುವ ವ್ಯವಸ್ಥೆ! ಅಗತ್ಯಕ್ಕೆ ತಕ್ಕಷ್ಟು ಎಂದರೆ 4000 ವಿದ್ಯುತ್ ದೀಪಗಳ ಜೋಡಣೆ. ಆ ಶಿಬಿರದಲ್ಲಿ ಸರಸಂಘಚಾಲಕರಾದ ಸುದರ್ಶನಜೀಯವರಿಂದ ಮಾರ್ಗದರ್ಶನ.

### 2012 –ಹುಬ್ಬಳ್ಳಿಯ ವಿಕ್ರಮ

ಕರ್ನಾಟಕದಲ್ಲಿ ಆರ್.ಎಸ್.ಎಸ್. ಚಟುವಟಿಕೆಗಳು ಪ್ರಾರಂಭವಾದುದು ಬೆಳಗಾವಿಯ ಚಿಕ್ಕೋಡಿಯಲ್ಲಿ. ಸಂಘದ ಸ್ಥಾಪಕರಾದ ಡಾ. ಹೆಡಗೇವಾರರು ಚಿಕ್ಕೋಡಿಗೆ ಭೇಟಿ ನೀಡಿದ್ದರು. ಅದು 1937 ರಲ್ಲಿ. ಅನಂತರ ಆರೇಳು ವರ್ಷಗಳವರೆಗೆ ಸಂಘದ ಕೇಂದ್ರವಾಗಿದ್ದುದು ಬೆಳಗಾವಿಯೇ, ಅನಂತರ ಸಹಜವಾಗಿ ರಾಜಧಾನಿ ಬೆಂಗಳೂರು ಸಂಘದ ಪ್ರಾಂತ ಕೇಂದ್ರವೂ ಆಯಿತು.

ಸಮಾಜ ಬಾಂಧವರು ಶಿಬಿರಾರ್ಥಿಗಳಿಗೆ ಉಣಬಡಿಸಲೆಂದು ಕಡಕ್ ರೊಟ್ಟಿ, ದವಸಧಾನ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಹುಬ್ಬಳ್ಳಿಯ ಮನೆಮನೆಗಳಿಂದ ಒಟ್ಟು ಒಂದು ಲಕ್ಷ ಶೇಂಗಾ ಹೋಳಿಗೆಗಳನ್ನು ತಯಾರಿಸಿ, ಬೇರೆ ಬೇರೆ ಊರುಗಳಿಂದ ಹುಬ್ಬಳ್ಳಿಗೆ ಆಗಮಿಸುವ ಶಿಬಿರಾರ್ಥಿಗಳಿಗೆಲ್ಲ ಪ್ರೀತಿಯ ಸಿಹಿಭೋಜನ ನೀಡುವ ಸಿದ್ಧತೆ ಮಾಡುತ್ತಿದ್ದಾರೆ.

■ ರಾಮಚಂದ್ರ ಕಾಸರಗೋಡು

## ಸಂಘ–ಸಮಾಜಕ್ಕೆ ಸಂಜೀವಿನಿ

ಸಂಘಕ್ಕೊಂದು ಹೆಸರಿದೆ, ಆ ಹೆಸರಿಗೊಂದು ಅರ್ಥ ಇದೆ, ಅರ್ಥಕ್ಕೊಂದು ಮಹತ್ವವಿದೆ.

ಸಂಘದ ಹೆಸರು 'ರಾಷ್ಟ್ರೀಯ ಸ್ವಯಂಸೇವಕ ಸಂಘ' (ಆರ್.ಎಸ್.ಎಸ್.). ಪರಮಪೂಜನೀಯ ಡಾಕ್ಟರ್ ಹೆಡಗೇವಾರ್ ಸಂಘದ ಸ್ಥಾಪಕರು. ಸಂಘ ಪ್ರಾರಂಭವಾದುದು 1925ರ ವಿಜಯದಶಮಿಯಂದು, ನಾಗಪುರದಲ್ಲಿ ಡಾಕ್ಟರ್‌ಜೀಯವರು ಹಿಂದು ಸಮಾಜದಲ್ಲಿ ಪ್ರಮುಖವಾಗಿ ಮೂರು ದೋಷಗಳನ್ನು ಗುರುತಿಸಿದರು. ಆತ್ಮವಿಸ್ಮೃತಿ, ಆಲಸ್ಯ ಮತ್ತು ಅಹಂಕಾರ (ನಾನು, ನನ್ನದು ಎಂಬ ಭಾವ). ಸಂಘದ ಹೆಸರಿನಲ್ಲಿರುವ ಒಟ್ಟು ಮೂರು ಶಬ್ದಗಳು ಸಮಾಜದ ಒಂದೊಂದು ರೋಗಕ್ಕೆ ಪರಿಹಾರದ ರೂಪದಲ್ಲಿವೆ.

ಡಾಕ್ಟರ್‌ಜೀಯವರು ಸಮಾಜದ ಈ ಕಾಯಿಲೆಗೆ ಸಂಘ ರೂಪದ ಔಷಧಿಯನ್ನು ಆವಿಷ್ಕಾರ ಮಾಡಿದರು. ಅವರೇನೂ ಸಂಘವನ್ನು ಇದ್ದಕ್ಕಿದ್ದಂತೆ ಪ್ರಾರಂಭಿಸಲಿಲ್ಲ. ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲೇ ಉಗ್ರ ದೇಶಭಕ್ತರಾಗಿದ್ದವರು. ವೈದ್ಯಕೀಯ ಶಿಕ್ಷಣ–ಕ್ಕಾಗಿ ನಾಗಪುರದಿಂದ ಕಲ್ಕತ್ತೆಗೆ ಹೋದವರು. ವೈದ್ಯಕೀಯ ಪದವಿ ಪಡೆಯುವುದು ಲೌಕಿಕ ಉದ್ದೇಶವಾಗಿದ್ದರೆ, ಅಲ್ಲಿನ ಕ್ರಾಂತಿಕಾರಿಗಳೊಂದಿಗೆ ದೇಶಕ್ಕಾಗಿ ಹೋರಾಟದಲ್ಲಿ ಭಾಗಿಯಾಗುವುದು ಅವರ ಅಂತರ್ಯದ ಉದ್ದೇಶವಾಗಿತ್ತು. ಅನಂತರ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಹಿಂದು ಮಹಾಸಭೆಯೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡಿದ್ದರು. ಪತ್ರಿಕಾ ರಂಗದಲ್ಲಿ ದುಡಿದರು. ಹೀಗೆ ತಮ್ಮ ಸುದೀರ್ಘ ಅನುಭವದ ರಸಪಾಕವಾಗಿ ಅವರು ಸಂಘವನ್ನು ಪ್ರಾರಂಭಿಸಿದರು.

ಸಂಘದ ಹೆಸರಿನಲ್ಲಿ ಮೊದಲ ಶಬ್ದವೇ 'ರಾಷ್ಟ್ರೀಯ'. ತಾಯ್ನಾಡಿನ ಜೊತೆಗಿನ ಭಾವಾತ್ಮಕ ಸಂಬಂಧವೇ ರಾಷ್ಟ್ರೀಯತೆ. ಈ ದೇಶವನ್ನು ಮಾತೃಭಾವದಿಂದ ಕಾಣುವುದು, ಅದಕ್ಕೆ ತಕ್ಕಂತೆ ನಡೆಯುವುದು. ಅಂದರೆ, 'ಎಲ್ಲರೂ ನಮ್ಮವರೇ' ಎಂಬುದನ್ನು ಆಚರಣೆಯಲ್ಲಿ ತರುವುದು, ಬಸವಣ್ಣನವರು ಸಾರಿದ ತತ್ವವೂ ಇದೇ ಅಲ್ಲವೇ?

ರಾಷ್ಟ್ರೀಯ ಭಾವನೆ ಮಸುಕಾದಾಗ ಉಂಟಾಗುವ ಅನಾಹುತಗಳ ಉದಾಹರಣೆಗಳೂ ಕಡಿಮೆಯೇನಲ್ಲ. ರಾಷ್ಟ್ರೀಯ ಭಾವ ಜಾಗೃತಗೊಂಡಾಗಲೆಲ್ಲ ದೇಶ, ತನ್ನೆಲ್ಲ ಭೇದಗಳನ್ನು ಮರೆತು ಒಂದಾಯಿತು, ವಿಜಯದ ಹಾದಿಯಲ್ಲಿ ಮುನ್ನಡೆಯಿತು. ಜಮ್ಮು–ಕಾಶ್ಮೀರ ಸರಕಾರ, ಜಮ್ಮುವಿನಲ್ಲಿ ಹಿಂದು ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಅಮರನಾಥ ಮಂದಿರಕ್ಕೆ ಕೊಡಲಾಗಿದ್ದ ಭೂಮಿಯನ್ನು ಹಿಂದೆ ಪಡೆದ ಘಟನೆ ನಡೆಯಿತು. ಆಗ ಇಡೀ ದೇಶದ ಜನತೆ ವಿಶೇಷವಾಗಿ ಜಮ್ಮುವಿನ ಜನತೆ ಒಂದಾಗಿ ಅಮರನಾಥದ ಪರವಾಗಿ ದನಿ ಎತ್ತಿದರು. ಇದರ ಹಿಂದಿದ್ದ ಪ್ರೇರಣೆಯಾದರೂ ರಾಷ್ಟ್ರೀಯ ಏಕಾತ್ಮತೆಯೇ ಆಗಿತ್ತು.

ಸ್ವಯಂಸೇವಕನೆಂದರೆ ನಿಸ್ವಾರ್ಥತೆಯಿಂದ, ಸಮಾಜಹಿತಕ್ಕಾಗಿ ಸಮರ್ಪಣಾ ಭಾವದಿಂದ ಕಾರ್ಯ ಮಾಡುವವನು. ಅವನು 'ನನ್ನದೇ ಸರಿ' ಎಂಬ ಧೋರಣೆಯವನಲ್ಲ. ಅವನಲ್ಲಿನ 'ನಾನು' ಕ್ರಮೇಣ ಅಳಿದು, 'ನಾವು' ಎಂಬ ಭಾವ ಬೆಳೆಯುತ್ತ ಹೋಗುತ್ತದೆ. ಅಹಂಕಾರ ಮಾಯವಾಗಿ ವಿನಮ್ರತೆ ಮೂಡುತ್ತದೆ. ಸ್ವಯಂಸೇವಕ ಮತ್ತು 'ಆಲಸ್ಯ' ಪರಸ್ಪರ ವಿರುದ್ಧ ಶಬ್ದಗಳು. ಆಲಸ್ಯಕ್ಕೆ ಸ್ವಯಂಸೇವಕತ್ವವೇ ಔಷಧಿ. ಸ್ವಯಂಸೇವಕ ಸದಾ ಕ್ರಿಯಾಶೀಲನಾಗಿರುತ್ತಾನೆ. ಅವನು ನಿರಾಶನಾಗುವುದಿಲ್ಲ. ಎಂದೂ ತಾನು 'ಏಕಾಂಗಿ' ಎಂದು ಚಿಂತಿಸುತ್ತ ಕೂರುವುದಿಲ್ಲ. ಇದು ಡಾಕ್ಟರ್‌ಜೀಯವರು ಗುರುತಿಸಿದ ಎರಡನೆಯ ದೋಷಕ್ಕೆ ಅವರೇ ನೀಡಿದ ಪರಿಹಾರ, ಆಲಸ್ಯಕ್ಕೊಂದು ಮದ್ದು.

'ಎಲ್ಲರೂ ನಮ್ಮವರು' ಎಂಬ ಭಾವದ ಜಾಗರಣವಾದಾಗ ವ್ಯಕ್ತಿಯೊಬ್ಬ ತನ್ನ ಶಕ್ತಿಗೆ ಮೀರಿದ ತ್ಯಾಗಕ್ಕೆ ಸಿದ್ಧನಾಗುತ್ತಾನೆ. ಜಾತಿ, ಭಾಷೆ, ಸಂಪ್ರದಾಯಗಳನ್ನು ಮೀರಿ ಸ್ವಯಂಸೇವಕರು ಕಾರ್ಯಪ್ರವೃತ್ತರಾಗುವುದು ಈ ಕಾರಣದಿಂದ. ಡಾಕ್ಟರ್‌ಜೀಯವರು, ಅಕಾಲಗಳ ಸಂದರ್ಭದಲ್ಲಿ, ಪ್ರವಾಹ ಪೀಡಿತರ ಸೇವೆಗಾಗಿ ಹಗಲಿರುಳೆನ್ನದೆ ದುಡಿದು ಸ್ವಯಂಸೇವಕರ ಮುಂದೆ ಸ್ವಂತದ ಆದರ್ಶವೊಂದನ್ನು ಹಾಕಿಕೊಟ್ಟಿದ್ದರು. ಅದೇ ಹಾದಿಯಲ್ಲಿ ಸಾಗುತ್ತಿರುವ ಸ್ವಯಂಸೇವಕರು ಇಂದು ಶಿಕ್ಷಣ, ಆರೋಗ್ಯ ಸ್ವಾವಲಂಬನೆ, ಸಂಸ್ಕಾರಗಳ ಕ್ಷೇತ್ರದಲ್ಲಿ 1.50 ಲಕ್ಷಕ್ಕೂ ಹೆಚ್ಚು ಸೇವಾಕಾರ್ಯಗಳನ್ನು ನಡೆಸುತ್ತಿದ್ದಾರೆ.

ಸೇವಾಭಾರತಿಯ ಹೆಸರಿನಲ್ಲಿ ಹತ್ತು ಹಲವು ಸೇವಾಕಾರ್ಯಗಳನ್ನು ಸ್ವಯಂಸೇವಕರು ಮಾಡುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಅನಾಥ ಮಕ್ಕಳಿಗಾಗಿ ಬಾಲಕಲ್ಯಾಣ ಕೇಂದ್ರ, ಗದಗ್‌ನಲ್ಲಿ ವಿಕಲಚೇತನ ಮಕ್ಕಳಿಗಾಗಿ ಅರುಣೋದಯ ಶಾಲೆ, ಕಲಬುರ್ಗಿ ಬಾಗಲಕೋಟೆಗಳಲ್ಲಿ ಕೊಳಚೆ ಪ್ರದೇಶದ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳು, ಬಾಗಲಕೋಟೆಯಲ್ಲಿ ಚಿಂದಿ ಆಯುವ ಮಕ್ಕಳಿಗಾಗಿ ಆಶ್ರಯಧಾಮವನ್ನು ನಡೆಸಲಾಗುತ್ತಿದೆ. ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ ಸಂಚಾರಿ ಆಸ್ಪತ್ರೆಯ ಮೂಲಕ 22 ಗ್ರಾಮಗಳಲ್ಲಿ ಚಿಕಿತ್ಸೆಯನ್ನು ನೀಡಿ, ನರಳುವ ಕಣ್ಣುಗಳಲ್ಲಿ ಬೆಳಕನ್ನು ತುಂಬುವ ಕಾರ್ಯವನ್ನು ಮಾಡುತ್ತಿದ್ದಾರೆ. ಶಿರಸಿಯಲ್ಲಿ ಆಪ್ತ ಸಲಹಾಕೇಂದ್ರ, ಕಾರವಾರ ಜಿಲ್ಲೆಯ ಹಳದೀಪುರದಲ್ಲಿ, ಧಾರವಾಡ ಜಿಲ್ಲೆಯ ವಾಸನದಲ್ಲಿ ಗ್ರಾಮವಿಕಾಸದ ಚಟುವಟಿಕೆಗಳು ನಡೆಯುತ್ತಿವೆ. ಬೆಳಗಾವಿಯಲ್ಲಿ ಬಡಮಹಿಳೆಯರಿಗಾಗಿ ಸ್ವಾವಲಂಬನ ಕೇಂದ್ರವು ನೂರಾರು ಮಹಿಳೆಯರ ಬದುಕಿಗೆ ಆಸರೆಯನ್ನೊದಗಿಸುವ ಕೆಲಸವನ್ನು ಮಾಡುತ್ತಿದೆ. ಹೀಗೆ ನೂರಾರು ಸೇವಾಕಾರ್ಯಗಳ ಮೂಲಕ ಸಾಮಾಜಿಕ ಪರಿವರ್ತನೆಯ ಕಾರ್ಯದಲ್ಲಿ ಸ್ವಯಂಸೇವಕರು ತೊಡಗಿದ್ದಾರೆ.

ಸಂಘ, ಶಕ್ತಿಯ ಪ್ರತೀಕ. 'ಸಂಘೇ ಶಕ್ತಿಃ ಕಲೌ ಯುಗೇ' ಕಲಿಯುಗದಲ್ಲಿ ಸಂಘಟನೆಯಿಂದಲೇ ಶಕ್ತಿ ಎಂಬ ಉಕ್ತಿ ಇದೆ. ಹಿಂದುಗಳೆಂದೂ ಒಗ್ಗಟ್ಟಾಗಲಾರರು ಎಂಬ ಭಾವನೆ ಎಲ್ಲೆಡೆ ವ್ಯಾಪಿಸಿದ್ದ ಕಾಲದಲ್ಲಿ ಡಾಕ್ಟರ್‌ಜೀಯವರು ಹಿಂದುಗಳಲ್ಲಿ ಹುದುಗಿರುವ ಸದ್ಗುಣಗಳ ಮೇಲೆ ದೃಢವಿಶ್ವಾಸವಿರಿಸಿ ಸಂಘಟನೆಯ ಕಾರ್ಯವನ್ನು ಪ್ರಾರಂಭಿಸಿದರು. ಹಿಂದುಗಳು ಒಗ್ಗಟ್ಟಾಗಬಲ್ಲರು ಎಂಬುದನ್ನು ಸಾಧಿಸಿ ತೋರಿಸಿದರು. ತಿರುಪತಿಯ ತಿಮ್ಮಪ್ಪನ ಏಳು ಬೆಟ್ಟಗಳೊಡೆತನವನ್ನು ಬದಲಿಸುವ ಆಂಧ್ರಸರ್ಕಾರದ ಹುನ್ನಾರವನ್ನು ಸಂಘಟಿತ ಜನಶಕ್ತಿಯೇ ವಿಫಲಗೊಳಿಸಿತು. ಜನಾಂದೋಲನದಿಂದ ಅಲ್ಲಿನ ಮತಾಂತರ ಯತ್ನಗಳಿಗೂ ತಡೆ ಬಿತ್ತು. ಶ್ರೀರಾಮಸೇತುವನ್ನು ಒಡೆಯಲು ಮುಂದಾದ ಕೇಂದ್ರ ಸರ್ಕಾರವು ದೇಶದ ಜನತೆಯ ಒಕ್ಕೊರಲ ವಿರೋಧಕ್ಕೆ ತಲೆಬಾಗಬೇಕಾಯಿತು. ರಾಮಸೇತು ಉಳಿಯಿತು. ದೇಶ–ಧರ್ಮ–ಸಂಸ್ಕೃತಿಗಳ ಮೇಲಿನ ಶ್ರದ್ಧೆ, ಕ್ರಿಯಾಶೀಲತೆ ಮತ್ತು ಸಂಘಟಿತ ಪ್ರಯತ್ನ ಇವುಗಳಿಂದಲೇ ನಮ್ಮ ಕನಸುಗಳೆಲ್ಲ ನನಸಾಗುತ್ತಿವೆ.

■ ಎಸ್.ಆನಂದ ಬಳ್ಳಾರಿ